ಸುಳ್ಯ, ಮಂಗಳೂರು ಹೀಗೇ ಎಲ್ಲಿಗೆ ಬೇಕಾದರೂ ಹೋಗಬೇಕಾಗಿತ್ತು. ಕಾಡು ಕಡಿದು ರಬ್ಬರ್ ಬಂದ ಮೇಲೆ ಈ ಎರಡು ಊರವರಿಗೆ ಆದ ಬಹುದೊಡ್ಡ ಲಾಭ ಕ್ರೂರ ಕಾಡುಮೃಗವಿದ್ದ ನಿಬಿಡ ಕಾಡು ಬೋಳಾಗಿ ರಬ್ಬರ್‌ನವರು ನಾಟಾ ಸಾಗಿಸಲು, ಗೊಬ್ಬರ, ಗಿಡ ಇತ್ಯಾದಿ ತಂದುಕೊಳ್ಳಲು ಮಾಡಿದ ಮಣ್ಣಿನ ರಸ್ತೆಯ ಸುಗಮ ಹಾದಿ. ಜನ ಸ್ವಲ್ಪ ದೂರವಾದರೂ ಅಡ್ಡಿಯಿಲ್ಲ ಎಂದು ಹಳೆಯ ಅಂಕುಡೊಂಕು ಹಾದಿ ಬಿಟ್ಟು ಇಂಥ ಕಚ್ಚಾಮಣ್ಣಿನ ಹೊಸ ರಸ್ತೆಯಲ್ಲೇ ನಡೆದು ಸಣ್ಣ ಪೇಟೆಗೆ ಹೋಗಿಬರಲು ಪ್ರಾರಂಭಿಸಿದರು. ಎಷ್ಟೇ ದೂರವಿದ್ದರೂ, ಕಣಿವೆ ಕೊರಕಲು ಬೆಟ್ಟಗುಡ್ಡವಿದ್ದರೂ ಈ ಹಿಂದಿನ ಹಳೆಯ ಹಾದಿ ತುಂಬಾ ಮರಗಳಿದ್ದು ನೆರಳಾಗಿ ಎಷ್ಟೇ ನಡೆದರೂ ಬಚ್ಚುತ್ತಿರಲಿಲ್ಲ. ಅಜ್ಜಿಕಲ್ಲು ಬೆಟ್ಟದ ತುದಿಯಲ್ಲಿ ಆಗ ಒಂದು ಪುಟ್ಟ ನೀರ ಚಿಲುಮೆಯೂ ಇತ್ತು. ಆ ಚಿಲುಮೆಗಿಳಿದು ನೀರು ಕುಡಿದು ಅಜ್ಜಿ ಸಮಾಧಿಯ ಮೇಲೆ ಕಲ್ಲುಹಾಕಿ ಹೋಗುವುದು ವಾಡಿಕೆಯಾಗಿತ್ತು.

ಇದೇ ಅಜ್ಜಿಕಲ್ಲು ದುರ್ಗಮ ಹಾದಿಯಲ್ಲಿ ರಬ್ಬರ್ ಬರುವ ಮುಂಚೆ ಹುಲಿ, ಚಿರತೆಗಳು ಯಥೇಚ್ಚವಾಗಿ ಇದ್ದವಂತೆ. ಅಜ್ಜಿಕಲ್ಲು ಚಿಲುಮೆಗೆ ನೀರು ಕುಡಿಯಲು ಅವುಗಳು ಹಗಲು ರಾತ್ರಿ ಬರುತ್ತಿದ್ದವು ಎಂದೆಲ್ಲಾ ಜನ ಮಾತಾಡುತ್ತಿದ್ದರು. ದೇರ್ಲದ ಪಿಲಿ ಪಕೀರಪ್ಪ ರೈಯವರು ಇದೇ ಭಾಗದಲ್ಲಿ ಮರಸು ಬೇಟೆಯಲ್ಲಿ ಕಾದುಕೂತು ಒಂದೆರಡು ಹುಲಿಗಳನ್ನು ಹೊಡೆದದ್ದು; ಒಂದು ಹುಲಿ ಅವರ ಕೈಯನ್ನೇ ಕಡಿದದ್ದು ಇಲ್ಲೇ ಇಲ್ಲೇ ಎಂದು ಜನ ಮಾತನಾಡುತ್ತಿದ್ದರು. ಸಂಜೆಯಾದ ಮೇಲೆ ಇಲ್ಲಿ ಯಾರೂ ಕೂಡಾ ನಡೆದು ಹೋಗುತ್ತಿರಲಿಲ್ಲ. ಮತ್ತೆ ಏನಿದ್ದರೂ ಜನ ಬೆಳಗ್ಗೆ ಬೇಗ ಎದ್ದು ಗುಂಪು ಗುಂಪಾಗಿ ಹೋಗುತ್ತಿದ್ದರು ಎಂದೆಲ್ಲಾ ಅಮ್ಮ ಹೇಳುತ್ತಿದ್ದುದು ನನಗೆ ನೆನಪಿದೆ.

ನಮ್ಮೂರ ಹುಲಿ ಬೇಟೆಗಾರ ಪಿಲಿ ಪಕೀರಪ್ಪ ರೈಯವರನ್ನು ನಾನು ನೋಡಿದ್ದೇನೆ. ಮೃಗಯಾ ಸಾಹಿತಿ ಕೆದಂಬಾಡಿ ಜತ್ತಪ್ಪ ರೈಯವರು ತಮ್ಮ ಬೇಟೆಯ ಕಥನಗಳಲ್ಲಿ ಪಿಲಿ ಪಕೀರಪ್ಪ ರೈಯವರ ಸಾಹಸವನ್ನು ಕೊಂಡಾಡಿದ್ದಾರೆ. ಕಣಿಯಾರು, ಬಂಟಮಲೆ, ಚಿಲ್ಮೆತ್ತಾರು, ಬಳ್ಳೇರಿ ಮುಂತಾದ ಕಾಡುಗಳಲ್ಲಿ ಬೇಟೆಯಾಡಿದ ಅವರ ಶಿಕಾರಿಯ ನೆನಪುಗಳು ಎಲ್ಲೂ ದಾಖಲಾಗಲಿಲ್ಲ. ಕಾರಣ ಅವೆಲ್ಲವನ್ನೂ ದಾಖಲಿಸುವಷ್ಟು ಅಕ್ಷರ–ಸಾಹಿತ್ಯ ಸಂಪತ್ತು ಅವರಲ್ಲಿರಲಿಲ್ಲ. ಮತ್ತು ಬೇಟೆಯ ಕಥನ ಒಂದು ಬಗೆಯ ಬೇಡಿಕೆಯ ಸಾಹಿತ್ಯವಾಗಬಲ್ಲುದು ಎಂಬುದು ಅವರಿಗೆ ಗೊತ್ತಿರಲಿಲ್ಲ. ಮರಸು ಬೇಟೆಯಲ್ಲಿ ಹುಲಿಗೆ ಗುಂಡಿಕ್ಕಿ ಅರೆ ಪೆಟ್ಟಾದ ಹುಲಿಯನ್ನು ಹುಡುಕಿಕೊಂಡು ಹೋಗಿ ತೀರಾ ಅನಿರೀಕ್ಷಿತವಾಗಿ ಅದರ ಬಾಯಿಗೆ ಬಿದ್ದು ಅವರು ಬದುಕಿ ಬಂದ ಕಥೆ ದೇರ್ಲದಲ್ಲಿ ಜನಜನಿತ. ಹುಲಿ ಕಡಿದ ಕಾರಣ ಅವರ ಕೈಯೊಂದು ಊನಗೊಂಡದ್ದನ್ನು ನಾನು ಕಂಡದ್ದು ಆವಾಗ ಅವರು ಆ ರೋಚಕ ಕಥೆಯನ್ನು ಬಣ್ಣಿಸಿದ್ದು ಹೀಗೆ ಎಲ್ಲವೂ ಅಸ್ಪಷ್ಟವಾಗಿ ನೆನಪಿದೆ. ಆಗ ಬಹಳ ಚಿಕ್ಕವನಾದ ಕಾರಣ ಆ ಕಥಾನಕದ ಪೂರ್ಣರೂಪ ನನ್ನ ಸ್ಮೃತಿಪಟಲದಲ್ಲೀಗ ಸ್ಪಷ್ಟವಾಗಿಲ್ಲ.

ಪಿಲಿ ಪಕೀರಪ್ಪ ರೈ ಹುಲಿ ಕೊಂದ ಆಗಿನ ಆ ದುರ್ಗಮ ನಿಬಿಡ ಕಾಡಿನ ಅಜ್ಜಿಕಲ್ಲು ರಬ್ಬರ್‌ಗಾಗಿ ಬೋಳಾದ ಕಾರಣದಿಂದ ಮುಂದೆ ಯಾವ ಭಯಾನಕ, ಭೀಷಣ, ರೌದ್ರತೆಯನ್ನೂ ಉಳಿಸಿಕೊಳ್ಳದೆ ಎಲ್ಲವನ್ನೂ ತೆರೆದು ತೋರಿಸುವ ಬಟಾಬಯಲಾಗಿ ಆ ದಾರಿಯಲ್ಲಿ ದಿನಾ ನಡೆಯುವ ದೊಡ್ಡವರು ಬಿಡಿ, ಶಾಲಾ ಮಕ್ಕಳಿಗೆ, ಪರಊರ ದಾರಿಹೋಕರಿಗೂ ಅದು ಎಲ್ಲಾ ಊರುಗಳಂತೆ ಸಾಮಾನ್ಯ ಹಾದಿಯಾಗಿ ಪರಿಣಮಿಸಿತು. ರಬ್ಬರ್ ಚಿಗುರಿದ ಮೇಲೆ, ಅವುಗಳ ಬುಡ ಬುಡಗಳಲ್ಲಿ ಕಳೆ ಕಾಡುಸದೆ ಬರದಂತೆ ಜವ್ವನಿಗೆ ಬಳ್ಳಿಯು ಚಿಗುರಲಾರಂಭಿಸಿದ ಮೇಲೆ ಮತ್ತೆ ಕಳೆಗುಂದಿದ ಬರಡು ಭೂಮಿಯ ಮೇಲೆ ನಿಧಾನವಾಗಿ ಜೀವಂತಿಕೆ ಕಾಣಲಾರಂಭಿಸಿತು. ನೆಲದ ಮೇಲೆ ಎಷ್ಟೇ ಹಸಿರು ಬಂದರೂ ನಮ್ಮೂರವರಿಗೆ ಅದು ಕೃತಕ ಹಸಿರು. ಸರಕಾರಿ ರಬ್ಬರ್ ಕಾಡು–ಕೂಪು.

ಕಾಡಿನ ನಿಗೂಢತೆ, ಕತ್ತಲಿಗೆ ಮಾತ್ರ ಭಯದ ಮೂಲಕ ಕಾಡುವ ಶಕ್ತಿ ಇದೆ. ಎಲ್ಲೂ